ಮೈಸೂರಿನ ಚೆಲುವಾಂಬ ಹೆರಿಗೆ ಆಸ್ಪತ್ರೆ ವಿಸ್ತರಣೆ.

೧೩೦೫. ಶ್ರೀ ಪಿ. ಎಂ. ಬೋರಯ್ಯ (ಚಾಮರಾಜ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮೈಸೂರಿನ ಚೆಲುವಾಂಬ ಹೆರಿಗೆ ಆಸ್ಪತ್ರೆ ಪ್ರಾರಂಭವಾಗಿ ನೂರು ವರ್ಷಗಳು ದಾಟಿದ್ದಾಗ್ಯೂ ಕೂಡ ಅದು ಸುಸಜ್ಜಿತವಾಗದೇ ಇರುವುದು ನಿಜವೆ ?

೨) ಅದರ ವಿಸ್ತರಣೆ ಮೈಸೂರು ನಗರದ ಬೆಳವಣಿಗೆಗೆ ತಕ್ಕಂತೆ ಆಗದೇ ಇರುವುದರಿಂದ ಬಡ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

೩) ಆಸ್ಪತ್ರೆಯ ಒಳರೋಗಿಗಳ ಒಟ್ಟು ಸಂಖ್ಯೆ ಎಷ್ಟು ? ಹಾಲಿ ಇರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ಹಾಗೂ ಅವಶ್ಯಕವಾಗಿ ಬೇಕಾದ ಸಿಬ್ಬಂದಿಯವರ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

೧) ಅಗತ್ಯವಾಗಿ ಬೇಕಾದ ಸೌಲಭ್ಯಗಳು ಇವೆ.

೨) –ಇಲ್ಲ–

೩) ಒಳರೋಗಿಗಳ ಸಂಖ್ಯೆ ೧೬,೩೨೭ (೧೯೬೭–೬೮)

ಹಾಸಿಗೆಗಳ ಸಂಖ್ಯೆ	೪೨೫
ಹಾಲಿ ಇರುವ ಸಿಬ್ಬಂದಿ ಸಂಖ್ಯೆ	೨೧೪
ನಿಯಮಾನುಸಾರ ಅಗತ್ಯವಿರುವ ಹೆಚ್ಚುವರಿ ಸಿಬ್ಬಂದಿ ಸಂಖ್ಯೆ	೧೭೦

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಚೆಲುವಾಂಬ ಆಸ್ಪತ್ರೆ ಪ್ರಾರಂಭವಾಗಿ ೧೦೭ ವರ್ಷಗಳಾಗಿವೆ ಅದರ ಜೊತೆಗೆ ಆಗ ಮೈಸೂರು ನಗರದಲ್ಲಿ ಒಂದೂವರೆ ಲಕ್ಷ ಜನಸಂಖ್ಯೆ ಇತ್ತು ಈಗಿನ ಜನಸಂಖ್ಯೆ ಸುಮಾರು ೭ ಲಕ್ಷಕ್ಕೆ ಏರಿದೆ. ಆದರೆ ಆ ಆಸ್ಪತ್ರೆ ಯಾವ ರೀತಿಯಲ್ಲೂ ಕೂಡ ವಿಸ್ತಾರವಾಗಿಲ್ಲ ಅಲ್ಲಿ ಏನು ಇರಬೇಕಾಗಿತ್ತೋ ಅದು ಇಲ್ಲ. ಮೊದಲನೇ ಪ್ರಶ್ನೆಗೆ ಅಲ್ಲಿ ಅಗತ್ಯವಾಗಿ ಬೇಕಾದ ಸೌಲಭ್ಯಗಳೆಲ್ಲಾ ಇದೆ ಎಂದು ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ. ಆದರೆ ಅಲ್ಲಿ ಸೌಲಭ್ಯಗಳು ಸಾಕಷ್ಟು ಇಲ್ಲ. ನನ್ನ ಕೋರಿಕೆಯಿಷ್ಟೇ. ಈ ಚೆಲುವಾಂಬ ಆಸ್ಪತ್ರೆಯಲ್ಲಿ ಎರಡು ಭಾಗಗಳು ಇದೆ ಒಂದು ಹೆರಿಗೆ ಆಸ್ಪತ್ರೆ ಮತ್ತೊಂದು ಮಕ್ಕಳ ಆಸ್ಪತ್ರೆ ಆದರೆ ಈ ಎರಡಕ್ಕೂ ಸೇರಿ ಸುಸಜ್ಜಿತವಾದ ಆಪರೇಷನ್ ಥಿಯೇಟರ್ ಇಲ್ಲವೆಂದು ಹೇಳಿದರೆ ತಪ್ಪಾಗಲಾರದೆಂದು ನನ್ನ ಭಾವನೆ. ಈ ಎರಡೂ ಆಸ್ಪತ್ರೆಗಳಿಗೂ ಇಂಟೆನ್ಸೀವ್ ಕೇರ್ ಯೂನಿಟ್ ಇಲ್ಲ, ಬ್ಲಡ್ ಬ್ಯಾಂಕ್ ಇಲ್ಲ ಮತ್ತು ಮಕ್ಕಳ ಆಸ್ಪತ್ರೆಗೆ ಬೇಕಾದ ಸಲೈನ್ ಯೂನಿಟ್ ಇಲ್ಲ. ಮಾನ್ಯ ಮಂತ್ರಿಗಳಿಗೆ ತಿಳಿದ ಹಾಗೆ ಆಪರೇಷನ್ ಥಿಯೇಟರ್ ಮೊದಲನೇ ಮಹಡಿಯಲ್ಲಿ ಇದೆ ಅಲ್ಲಿಗೆ ಹೋಗಲಿಕ್ಕೆ ಲಿಫ್ಟ್ ಅನ್ನು ಹಾಕಿದ್ದಾರೆ ಆದರೆ ಅದು ಕೆಟ್ಟು ಹೋಗಿ ಎರಡೂವರೆ ವರ್ಷವಾಗಿದೆ ಅದನ್ನು ಇನ್ನೂ ರಿಪೇರಿ ಮಾಡಿಸಿಲ್ಲ. ಆದರ ರಿಪೇರಿಯನ್ನು ಯಾವತ್ತು ಮಾಡಿಸುತ್ತೀರೆಂದು ಕೇಳಬಯಸುತ್ತೇನೆ. ಜನಸಂಖ್ಯೆಹಚ್ಚಾದಹಾಗೆ ಟೌನ್ ಪೇಷೆಂಟ್ ವಾರ್ಡಿನಲ್ಲಿ ಕೂಡ ಜನ ಹೆಚ್ಚಾಗಿದ್ದಾರೆ. ಅಲ್ಲಿ ಕೂರಲಿಕ್ಕೆ ಜಾಗವಿಲ್ಲದಂತಹ ಪರಿಸ್ಥಿತಿ ಇದೆ ಅದನ್ನು ವಿಸ್ತರಣೆ ಮಾಡಬೇಕೆಂದು ಅನೇಕ ಸಲ ಕೇಳಿಕೊಂಡಿದ್ದೇವೆ ಅದನ್ನು ಎಂದು ವಿಸ್ತರಣೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಚಿಕ್ಕಬೋರಯ್ಯನವರು ಏಕೆ ಶ್ರಮ ತೆಗೆದುಕೊಂಡು ಪ್ರಶ್ನೆ ಕೇಳುತ್ತಾರೆಯೋ ಗೊತ್ತಾಗಲಿಲ್ಲ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ನೋಡಿಲ್ಲ. ತಾವು ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿಲ್ಲ.

ಶ್ರೀ ಬಿ. ರಾಚಯ್ಯ.—ಅಲ್ಲಿ ಹೆಚ್ಚುವರಿ ಸಿಬ್ಬಂದಿ ಎಷ್ಟು ಜನಬೇಕು ಎಂದು ಕೇಳಿದ್ದಾರೆ. ಹೆಚ್ಚುವರಿ ಸಿಬ್ಬಂದಿ ಪಾಂಜೂರಾತಿ ಆಗಬೇಕಾಗಿದ್ದರೆ ಹಣಕಾಸಿನ ಒಂದು ಪರಿಸ್ಥಿತಿಯನ್ನು ನೋಡಿ

ಮಾಡಬೇಕಾಗುತ್ತದೆ, ಹೊಸದಾಗಿ ನಾವು ಸಿಬ್ಬಂದಿಯನ್ನು ಮಂಜೂರು ಮಾಡಿಲ್ಲ. ಎರಡನೆಯದು ಆಪರೇಷನ್ ಥಿಯೇಟರ್ ಸುಸಜ್ಜಿತವಾಗಿ ಆಧುನಿಕವಾದಂಥ ಆಪರೇಷನ್ ಥಿಯೇಟರನ್ನು ಮಾಡಬೆಕಾದರೆ ಅದಕ್ಕೆ ಹೆಚ್ಚು ಪರಿ ಹಣಬೇಕು. ಇನ್‌ಟೆನ್ಸೀವ್ ಕೇರ್ ಯೂನಿಟ್‌ಬೇಕು ಎಂದು ಹೇಳಿದ್ದಾರೆ, ಅದಕ್ಕೆ ಕಳೆದ ಸಾರಿ ವಿಸಿಟ್ ಮಾಡಿದಾಗ ಅದಕ್ಕೆ ಆರುವರೆ ಕೋಟಿ ರೂಪಾಯಿ ಹೆಚ್ಚು ಪರಿ ಹಣವನ್ನು ಅದಕ್ಕೆ ಒದಗಿಸಿ ಕೊಟ್ಟು ಕೆಲವು ರಿಪೇರಿಗಳನ್ನು ಕೂಡಾ ತೆಗೆದುಕೊಂಡಿದ್ದೇವೆ ಮತ್ತು ಇಲ್ಲಿ ಪ್ಲಾಯಿಡ್ ಸೆಂಟರ್ ತೆಗೆಯಬೇಕು ಎನ್ನುತಕ್ಕಂಥದ್ದು. ಅದಕ್ಕೆ ಒಂದು ನೀರಿನ ಸೌಕರ್ಯವನ್ನು ಒದಗಿಸಿ ಕೊಟ್ಟು ತೆಗೆಯಬೇಕು ಎಂದು ಮಾಡಿದ್ದೇವೆ. ಈ ವರ್ಷ ಹಣವನ್ನು ಒದಗಿಸಿ ಈ ಮೂರು ಯೂನಿಟ್‌ಗಳನ್ನು ರಿಪೇರಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಹೆಚ್ಚುವರಿ ಬೇಕಾದಂಥ ನೌಕರರನ್ನು ನೇಮಕ ಮಾಡದೇ ಇರುವುದರಿಂದ ರೋಗಿಗಳಿಗೆ ಅನಾನುಕೂಲತೆ ಆಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದಯೇ ಇಲ್ಲವೇ ? ಇದನ್ನು ಅನೇಕ ಬೇಳಿ ನಾವು ಕೂಡಾ ಅವರ ಗಮನಕ್ಕೆ ತಂದಿದ್ದೇವೆ. ಇದನ್ನು ಪರಿಹಾರ ಮಾಡಲಿಕ್ಕೆ ಏನು ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ನನ್ನ ಪ್ರಶ್ನೆ.

ಶ್ರೀ ಬಿ. ರಾಚಯ್ಯ.—ಈ ಹೆಚ್ಚುವರಿ ಸಿಬ್ಬಂದಿ ಬಗ್ಗೆ ಆದ ನ ಹಣಕಾಸಿನ ಒಂದು ಪರಿಸ್ಥಿತಿಯನ್ನು ನೋಡಿಕೊಂಡು ನಮ್ಮ ಇಲಾಖೆಯಲ್ಲಿ ಏನು ಉಳಿತಾಯ ಆಗುತ್ತದೆ, ಆದನ್ನು ಉಪಯೋಗಿಸಿಕೊಂಡು ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಎಲ್ಲಿ ಉಳಿತಾಯ ಆಗುತ್ತದೆ, ಅಂಥ ಸಂದರ್ಭಗಳಲ್ಲಿ ಇದನ್ನು ಉಪಯೋಗಿಸಿಕೊಂಡು ಹೆಚ್ಚುವರಿ ಸಿಬ್ಬಂದಿಯನ್ನು ಅಗತ್ಯವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಮೈಸೂರಿನ ಬಗ್ಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅಲ್ಲಿ ಎಕ್ಸ್‌ರೇ ಪ್ಲಾಂಟ್ ವರ್ಕ್ ಆಗುತ್ತಿಲ್ಲ. ಹೆಚ್ಚುವರಿ ಸಿಬ್ಬಂದಿಗೆ ದುಡ್ಡು ಇಲ್ಲ. ಅಲ್ಲಿ ಆಸ್ಪತ್ರೆ ನೋಡಿದರೆ ಮೂಗು ಮುಚ್ಚಿಕೊಂಡು ಅಲ್ಲಿಗೆ ಹೋಗಬೇಕು, ಅಂಥ ಒಂದು ಪರಿಸ್ಥಿತಿ ಇದೆ. ಹೀಗಿರುವಾಗ ಅಲ್ಲಿ ಆಸ್ಪತ್ರೆ ಏತಕ್ಕೆ ಇರಬೇಕು ? ಯಾವ ಕೆಲಸ ಮಾಡಿಸುವುದಕ್ಕೂ ಹಣ ಇಲ್ಲ ಇಂಥ ಸಂದರ್ಭಗಳಲ್ಲಿ ಆಸ್ಪತ್ರೆ ಏತಕ್ಕೆ ಇರಬೇಕು ? ಸ್ವಲ್ಪ ದಿವಸ ಅದನ್ನು ಮುಚ್ಚಿಬಿಡಿ. ರೋಗಿಗಳು ಇನ್ನೆಲ್ಲೋ ಹೋಗುತ್ತಾರೆ ಇಲ್ಲದೇ ಹೋದರೆ ಸತ್ತು ಹೋಗುತ್ತಾರೆ, ಆದ್ದರಿಂದ ಈ ಆಸ್ಪತ್ರೆಯನ್ನು ಮುಚ್ಚಿಬಿಡಿ.

ಶ್ರೀ ಬಿ. ರಾಚಯ್ಯ.—ಅವರು ಇತ್ತೀಚೆಗೆ ಹೋಗಿ ನೋಡಿಕೊಂಡು ಬಂದಿಲ್ಲ. ಅಲ್ಲಿ ಯಾವ ಯಾವ ಉಪಕರಣಗಳು ರಿಪೇರಿ ಆಗಬೇಕಾಗಿದೆ, ಅವುಗಳನ್ನು ಕಿಯೊನಿಕ್ಸ್ ಸಂಸ್ಥೆಗೆ ಕೊಟ್ಟಿದ್ದೇವೆ. ಎಕ್ಸ್‌ರೇ ವರ್ಕ್ ಮಾಡುತ್ತಿಲ್ಲ ಎಂದು ಹೇಳಂತಾರೆ, ಇದು ಸರಿಯಲ್ಲ. ಅಲ್ಲಿ ಕ್ಲಾಸ್-೪ ಸರ್ವೆಂಟ್ಸ್ ಶುಶ್ರೂಷೆಯನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ ಎಂದು ಹೇಳಿದ್ದಾರೆ ಅದಕ್ಕೋಸ್ಕರವಾಗಿ ನಮಗೆ ಇನ್ನು ಜಾಸ್ತಿ ಸಿಬ್ಬಂದಿ ಬೇಕಾಗಿದೆ. ಇನ್ನು ನಮಗೆ ೧೧ ಜನ ಔಷಧಿ ವಿತರಣೆ ಮಾಡುವುದಕ್ಕೆ ಬೇಕು. ಶುಶ್ರೂಷೆ ಮಾಡಲಿಕ್ಕೆ ದಾದಿಯರು ೬೧ ಜನ ಬೇಕಾಗುತ್ತಾರೆ, ಲ್ಯಾಬ್‌ಗೆ ೬ ಜನ ಬೇಕಾಗುತ್ತಾರೆ. ಕ್ಲಾಸ್-೪ ಸರ್ವೆಂಟ್ಸ್ ಹೆಚ್ಚುವರಿ ೮೩ ಜನ ಬೇಕು. ಈಗಾಗಲೇ ೧೧೫ ಜನ ೀಲ್ಲಿ ಕೆಲಸ ಮಾಡುತ್ತಿದ್ದಾರೆ, ಹೆಚ್ಚು ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಿಕೊಂಡ ಮಾತ್ರಕ್ಕೆ ಆಲ್ಲಿ ಆಸ್ಪತ್ರೆ ಕ್ಲೀನ್ ಆಗಿರುತ್ತದೆ ಎಂದು ನಾನು ಭಾವಿಸಿಕೊಂಡಿಲ್ಲ. ಈಗ ಇರುವ ಸಿಬ್ಬಂದಿಯವರಿಂದ ಸರಿಯಾದ ಕೆಲಸವನ್ನು ತೆಗೆದುಕೊಳ್ಳಬೇಕು. ಆಸ್ಪತ್ರೆಯಲ್ಲಿ ಎಲ್ಲಿ ಕಕ್ಕಸ್ ಕೆಟ್ಟು ಹೋಗಿದೆ, ಅವುಗಳನ್ನು ರಿಪೇರಿ ಮಾಡಿದ್ದಾರೆ. ಹಿಂದೆ ಇದ್ದ ಸ್ಥಿತಿಯೇ ಇದೆ ಎಂದು ಮಾನ್ಯ ಚಿಕ್ಕಬೋರಯ್ಯನವರು ಹೇಳಲಿ, ನಾನು ಒಪ್ಪಿಕೊಳ್ಳುತ್ತೇನೆ.

ರಾಯಚೂರು ನಗರದಲ್ಲಿ ಟ್ರಾಫಿಕ್ ಪೊಲೀಸ್ ಸ್ಟೇಷನ್ ತೆರೆಯುವುದು

೧೪೬೭. ಶ್ರೀ ಮಹಮ್ಮದ್ ಒವರ್ (ರಾಯಚೂರು).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರು ನಗರದಲ್ಲಿ ಟ್ರಾಫಿಕ್ ಪೊಲೀಸ್ ಸ್ಟೇಷನ್ ತೆರೆಯುವ ವಿಚಾರವಿದೆಯೇ ?